# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 311 |
| ಉತ್ತರಿಸಬೇಕಾದ ದಿನಾಂಕ | 06.12.2023 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಕೈಗೆತ್ತಿಕೊಂಡಿರುವ ವಸತಿ ಯೋಜನೆಗಳು ಯಾವುವು? | ಅನುಷ್ಠಾನ ಸಂಸ್ಥೆಯಾದ ರಾಜೀವ್ ಗಾಂಧಿ ವಸತಿ ನಿಗಮದಿಂದ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಬಸವ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ (ಗ್ರಾಮೀಣ & ನಗರ)<br>3. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ)<br>4. ವಾಜಪೇಯಿ ನಗರ ವಸತಿ ಯೋಜನೆ<br>5. ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ (ಬೆಂಗಳೂರು ನಗರದಲ್ಲಿ ಮಾತ್ರ)<br>6. ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ<br>7. ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ<br>8. ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ<br>9. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>10. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) (PMAY-U)<br><br>ಅಂತೆಯೇ, ಮತ್ತೊಂದು ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು (KSDB) ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯೊಂದಿಗೆ ಸಂಯೋಜಿಸಿಕೊಂಡು ರಾಜ್ಯದ ವಿವಿಧ ನಗರ/ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಕೊಳಗೇರಿ ಪ್ರದೇಶಗಳಲ್ಲಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. |

| | | |
|---|---|---|
| | | ಅದರಂತೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 1,80,253 ಮನೆಗಳನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರದಿಂದ ಅನುಮೋದನೆ ದೊರಕಿದ್ದು, ಮನೆಗಳ ನಿರ್ಮಾಣವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. |
| ಆ) | ಈ ವಸತಿ ಯೋಜನೆಗಳ ಪೈಕಿ ಕೇಂದ್ರ ಸರ್ಕಾರ ಸಹಾಯಧನ ನೀಡುತ್ತಿರುವ ವಸತಿ ಯೋಜನೆಗಳು ಯಾವುವು: | **ಕೇಂದ್ರ ಸರ್ಕಾರವು ಈ ಕೆಳಕಂಡ ಯೋಜನೆಗಳಿಗೆ ಸಹಾಯಧನ ನೀಡುತ್ತದೆ.**<br>1. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) (PMAY-U)<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) (PMAY-G)<br><br>ಕೇಂದ್ರ ಸರ್ಕಾರವು PMAY (U) ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ 1.50 ಲಕ್ಷ ಸಹಾಯಧನ ನೀಡುತ್ತದೆ. ಅಂತೆಯೇ, ರಾಜ್ಯ ಸರ್ಕಾರವು ಪ್ರತಿ ಫಲಾನುಭವಿಗೆ ಪ.ಜಾ / ಪ.ಪಂ ಫಲಾನುಭವಿಯಾಗಿದ್ದಲ್ಲಿ ರೂ 2.00 ಲಕ್ಷಗಳನ್ನು ಹಾಗೂ ಇತರೆ ಸಾಮಾನ್ಯ ವರ್ಗದ ಪ್ರತಿ ಫಲಾನುಭವಿಗೆ ರೂ 1.20 ಲಕ್ಷಗಳ ಸಹಾಯಧನವನ್ನು ನೀಡುತ್ತದೆ.<br><br>ಕೇಂದ್ರ ಸರ್ಕಾರವು PMAY-(G) ಯೋಜನೆಯಡಿ ಪ್ರತಿ ಮನೆಗೆ ರೂ 72,000/- ಹಾಗೂ ರಾಜ್ಯ ಸರ್ಕಾರವು ರೂ 48,000/- ಸೇರಿ ಒಟ್ಟಾರೆ ರೂ 1.20 ಲಕ್ಷಗಳ ಸಹಾಯಧನವನ್ನು ನೀಡುತ್ತಿವೆ. |
| ಇ) | ವಸತಿ ಯೋಜನೆಗಳಲ್ಲಿ ಫಲಾನುಭವಿಗಳ ವಂತಿಕೆ ಪಾವತಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಬಿಡುಗಡೆಗೆ ಬಾಕಿ ಇರುವ ವಂತಿಕೆ ಹಣ ಎಷ್ಟು: (ಯೋಜನೆವಾರು ಮಾಹಿತಿ ನೀಡುವುದು) | **ಹೌದು**<br><br>PMAY- BLC (Beneficiary Led Construction) ಮಾದರಿಯಲ್ಲಿ ಫಲಾನುಭವಿಗಳು ತಮ್ಮದೇ ನಿವೇಶನದಲ್ಲಿ ಮನೆಯನ್ನು ತಾವೇ ಸ್ವತಃ ನಿರ್ಮಿಸಿಕೊಳ್ಳಬೇಕಿದ್ದು, ಅವರುಗಳ ಬ್ಯಾಂಕ್ ಖಾತೆಗೆ ಸಹಾಯಧನವನ್ನು ಭೌತಿಕ ಪ್ರಗತಿಗನುಗುಣವಾಗಿ ನೇರವಾಗಿ ಬಿಡುಗಡೆ ಮಾಡಲಾಗುವುದರಿಂದ ವಂತಿಕೆ ಸಂಗ್ರಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>PMAY(U)- Affordable Housing in Partnership (AHP) ಘಟಕದಡಿ ನಗರ ಸ್ಥಳೀಯ ಸಂಸ್ಥೆಗಳಿಂದ ಒಟ್ಟು 52,189 ಮನೆಗಳನ್ನು ನಿರ್ಮಾಣ ಮಾಡಲು 44 ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ.<br><br>ಈ ಯೋಜನೆಗಳಡಿ ಪ್ರತಿ ಮನೆಯ ನಿರ್ಮಾಣ ವೆಚ್ಚವು ಸರಾಸರಿ ರೂ. 7.18 ಲಕ್ಷಗಳಾಗುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು ಹೊರತುಪಡಿಸಿ ಸಾಮಾನ್ಯ ವರ್ಗದ ಫಲಾನುಭವಿಯು ರೂ. 4.48 ಲಕ್ಷ ಹಾಗೂ ಎಸ್.ಸಿ / ಎಸ್.ಟಿ ವರ್ಗಕ್ಕೆ ಸೇರಿದ ಫಲಾನುಭವಿಯು ರೂ. 3.68 ಲಕ್ಷಗಳಷ್ಟು ಮೊತ್ತದ |

| | | |
|---|---|---|
| | | "ಫಲಾನುಭವಿ ವಂತಿಕೆ"ಯನ್ನು ಪಾವತಿಸಬೇಕಿದೆ.<br><br>ಅಂತೆಯೇ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ PMAY-AHP ಘಟಕದಡಿ ಅನುಷ್ಠಾನಗೊಳಿಸುತ್ತಿರುವ 295 ಯೋಜನೆಗಳಡಿ 1,80,253 ಮನೆಗಳನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ.<br><br>ಈ ಯೋಜನೆಗಳಡಿ ಪ್ರತಿ ಮನೆಯ ನಿರ್ಮಾಣ ವೆಚ್ಚವು ರೂ 5.95 ಲಕ್ಷಗಳಿಂದ ರೂ. 7.52 ಲಕ್ಷಗಳಾಗುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು ಹೊರತುಪಡಿಸಿ ಸಾಮಾನ್ಯ ವರ್ಗದ ಫಲಾನುಭವಿಯು 3.25 ಲಕ್ಷಗಳಿಂದ ರೂ. 4.82 ಲಕ್ಷಗಳು ಹಾಗೂ ಎಸ್.ಸಿ / ಎಸ್.ಟಿ ವರ್ಗಕ್ಕೆ ಸೇರಿದ ಫಲಾನುಭವಿಯು ರೂ. 2.45 ಲಕ್ಷಗಳಿಂದ ರೂ. 4.02 ಲಕ್ಷಗಳಷ್ಟು ಮೊತ್ತದ ವಂತಿಕೆಯನ್ನು ಪಾವತಿಸಬೇಕಿದೆ.<br><br>ಆದರೆ ಆಯ್ಕೆಯಾದ ಫಲಾನುಭವಿಗಳು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ್ದು, ಸಕಾಲದಲ್ಲಿ ವಂತಿಕೆ ಮೊತ್ತವನ್ನು ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಫಲಾನುಭವಿಗಳ ವಂತಿಗೆಯನ್ನು ಬ್ಯಾಂಕ್ ಸಾಲದ ಮೂಲಕ ಪಾವತಿಸಲು ಅನುಕೂಲವಾಗುವಂತೆ ಬ್ಯಾಂಕ್‌ಗಳೊಂದಿಗೆ Bank Linkages ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳೇ ಸಾಲ ಕೊಡಿಸಲು ಕ್ರಮವಹಿಸಲಾಗುತ್ತಿದೆ.<br><br>ಅಂತೆಯೇ, ಸರ್ಕಾರವೇ ಫಲಾನುಭವಿಗಳ ವಂತಿಗೆಯನ್ನು ಪಾವತಿಸಲು ಸಾಲದ ರೂಪದಲ್ಲಿ ಅನುಷ್ಠಾನ ಸಂಸ್ಥೆಗಳಿಗೆ<br>ಹಣಕಾಸನ್ನು ಒದಗಿಸುತ್ತಿದೆ.<br><br>ನಗರ ಸ್ಥಳೀಯ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿರುವ AHP Projects ಗಳಿಂದ ಒಟ್ಟು 47,887 ಫಲಾನುಭವಿಗಳಿಂದ ರೂ 2013.75 ಕೋಟಿಗಳ ಮೊತ್ತವನ್ನು ಸಂಗ್ರಹಿಸ ಬೇಕಾಗಿದ್ದು, ಈವರೆಗೆ ಕೇವಲ ರೂ 134.04 ಕೋಟಿಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಉಳಿದ ರೂ. 1879.72 ಕೋಟಿಗಳ ಮೊತ್ತವನ್ನು ಫಲಾನುಭವಿಗಳು ಪಾವತಿಸುವುದು ಬಾಕಿ ಇರುತ್ತದೆ. ಒಟ್ಟು 47,887 ಯೋಜನಾವಾರು ಮಾಹಿತಿ **ಅನುಬಂಧ-1**ರಲ್ಲಿ ಒದಗಿಸಿದೆ.<br><br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಮನೆಗಳಿಂದ ಒಟ್ಟಾರೆ ರೂ 6691.16 ಕೋಟಿಗಳಷ್ಟು ಫಲಾನುಭವಿ ವಂತಿಗೆಯ ಪೈಕಿ ಈ ಕೆಳಕಂಡಂತೆ ರೂ 1287.85 ಕೋಟಿಗಳನ್ನು ಕ್ರೋಢೀಕರಿಸಿಕೊಳ್ಳಲಾಗಿದೆ.<br><br>(ರೂ. ಕೋಟಿಗಳಲ್ಲಿ)<br>1 \| ಫಲಾನುಭವಿಗಳಿಂದ \| 310.19<br>2 \| ನಗರಾಭಿವೃದ್ಧಿ ಇಲಾಖೆ/ ULBಗಳಿಂದ \| 169.80 |

| | | |
|---|---|---|
| 3 | ಕಾರ್ಮಿಕ ಇಲಾಖೆಯ "ಗೃಹ ಭಾಗ್ಯ" ಯೋಜನೆಯಡಿ | 509.80 |
| 4 | SCP/TSP ಯೋಜನೆಯಿಂದ | 186.66 |
| 5 | ಅಲ್ಪಸಂಖ್ಯಾತರ ಇಲಾಖೆಯಿಂದ | 11.40 |
| 6 | ಸರ್ಕಾರಿ ಖಾತರಿಯೊಂದಿಗೆ ಬ್ಯಾಂಕ್ ಸಾಲ | 100.00 |
| | ಒಟ್ಟು | 1287.85 |

"ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 1BHK ಫ್ಲ್ಯಾಟಿನ ಬೆಲೆಯನ್ನು ರೂ 10.60 ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನಗಳನ್ನು ಹೊರತುಪಡಿಸಿ ಫಲಾನುಭವಿಗಳು ಕನಿಷ್ಠ ರೂ 5.00 ಲಕ್ಷಗಳಿಂದ ಗರಿಷ್ಠ ರೂ.7.00 ಲಕ್ಷಗಳವರೆಗೆ ಪಾವತಿಸಬೇಕಿದ್ದು, ಇದನ್ನು ಬ್ಯಾಂಕ್ ಸಾಲದ ಮೂಲಕ ಅಥವಾ ಫಲಾನುಭವಿಗಳೇ ಸ್ವಂತ ಉಳಿತಾಯದ ಮೂಲಕ ಪಾವತಿಸಬಹುದಾಗಿರುತ್ತದೆ.

| | | |
|---|---|---|
| ಈ) | ಫಲಾನುಭವಿಗಳ ವಂತಿಗೆ ಹಣ ಪಾವತಿಗೆ ಹಾಗೂ ವಂತಿಕೆ ಹಣ ಪಾವತಿಯಾಗದ ಕಾರಣ ಅರ್ಧಕ್ಕೆ ನಿಂತಿರುವ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಫಲಾನುಭವಿಗಳು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ್ದು, ಸಕಾಲದಲ್ಲಿ ವಂತಿಕೆ ಪಾವತಿಮಾಡದ ಕಾರಣ ಅರ್ಧಕ್ಕೆ ನಿಂತಿರುವ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸುವ ಉದ್ದೇಶದಿಂದ ಹಂತ ಹಂತವಾಗಿ ಮನೆಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದ್ದು ಫಲಾನುಭವಿಗಳ ವಂತಿಕೆಗೆ ಎದುರಾಗಿ ಹಂಚಿಕೆ ಮಾಡಿ ವಂತಿಕೆಯನ್ನು ವಸೂಲಿ ಮಾಡಲು ಕ್ರಮ ವಹಿಸಲಾಗುವುದು. ಫಲಾನುಭವಿಗಳಿಗೆ ಬ್ಯಾಂಕ್ ಸಾಲ ಸೌಲಭ್ಯವನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ. |

[ಸಂಖ್ಯೆ: ವಇ 159 ಹೆಚ್ಎಫ್ಎ 2023]

(ಬಿ.ಝಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

Scanned By Camera Scanner